(ಇಂದು ದಿಃ 19-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)
ಮುಂದುವರೆದ ಪಾಟೀ ಸವಾಲು **:- ಶ್ರೀ.B.S.S.** ವಕೀಲರಿಂದ **:-**

ಸರ್ವೆ ನಂ. 121/1/A 3 ಎಕರೆ 24 ಗುಂಟೆ ಜಮೀನನ್ನು ನಾನು ಮತ್ತು ನನ್ನ ತಮ್ಮ ಸೇರಿ ಬೇರೆಯವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಈ ದಾವೆ ಆದ ನಂತರ ಮಾರಾಟ ಮಾಡಿದ್ದೇವೆ ಎಂದು ಹೇಳುತ್ತಾರೆ. ಸದರಿ ಸ್ವತ್ತು ನಮ್ಮ ಹೆಸರಿಗೆ ಯಾವ ವರ್ಷ ಆಗಿತ್ತು ನನಗೆ ಗೊತ್ತಿಲ್ಲ. ನನ್ನ ತಂದೆಗೆ ಕನ್ನಡ ಓದಲು ಬರೆಯಲು ಬುರತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಓ.ಎಸ್. ನಂ. 39/2017
ಪಿ.ಡಬ್ಲ್ಯೂ- 1

ಕನ್ನಡ ಓದಲು ಬರೆಯಲು ಬರದ ಕಾರಣ 50 ವರ್ಷಗಳಿಂದ ಆಗಿರುವ ಮುಟೇಷನಗಳನ್ನು ಮತ್ತು ಪಹಣಿ ಪತ್ರಿಕೆಗಳನ್ನು ಓದಿ ತಿಳಿದುಕೊಳ್ಳಲು ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1972 ರಲ್ಲಿ ಖರೀದಿ ಪತ್ರದ ಪ್ರಕಾರ ವೆಂಕಟಯ್ಯನ ಹೆಸರಿಗೆ ಮುಟೇಷನ ಆದ ಸಂಗತಿ ನನ್ನ ತಂದೆಗೂ ಗೊತ್ತಿತ್ತು ಎಂದರೆ ಸರಿಯಲ್ಲ. ಅಂದಿನಿಂದ ವೆಂಕಟಯ್ಯ ಸದರಿ ಸ್ವತ್ತಿನ ಸ್ವಾಧಿನದಲ್ಲಿರುವ ಸಂಗತಿ ನನ್ನ ತಂದೆಗೆ ಮತ್ತು ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ವೆಂಕಟಯ್ಯನ ಹೆಸರಿನಲ್ಲಿ ಪಹಣಿ ಇದ್ದ ಸಂಗತಿ ಮತ್ತು ಆತ ಸ್ವಾಧಿನದಲ್ಲಿರು ಸಂಗತಿ ಗೊತ್ತಿದ್ದರು ಕೂಡ ಗೊತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮುಂಚೆ ನನ್ನ ತಂದೆ ಸ್ವಾಧಿನದಲ್ಲಿತ್ತು ಅವರು ತೀರಿಹೋದ ನಂತರ ನಮ್ಮ ಸ್ವಾಧಿನದಲ್ಲಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನು ಮತ್ತು ಪಕ್ಕದಲ್ಲಿ ನಮಗೆ ಸೇರಿದ ಜಮಿನಿನ ಸರ್ವೆ ನಂಬರ ಒಂದೇ ಆಗಿದ್ದು ಹಿಸ್ಸಾ ನಂಬರಗಳು ಮಾತ್ರ ಬೇರೆಯಾಗಿವೆ ಎಂದರೆ ಸರಿ. ಒಂದೇ ಸರ್ವೆ ನಂಬರ ಇರುವುದನ್ನು ದುರುಪಯೋಗ ಪಡಿಸಿಕೊಂಡು ನಾನು ನನ್ನ ತಮ್ಮ ಮಾರಾಟ ಮಾಡಿರುವ ಜಮೀನನ್ನು ಬಿಟ್ಟು ಉಳಿದ ಜಮೀನಿನ ದಾಖಲಾತಿಗಳಲ್ಲಿ ನಮ್ಮ ಹೆಸರು ಸೇರಿಕೊಂಡಿವೆ ಎಂದರೆ ಸರಿಯಲ್ಲ. ಒಂದೇ ಸರ್ವೆ ನಂಬರ ಆಗಿರುವ ಕಾರಣ ಅಕ್ಕ-ಪಕ್ಕದ ಜಮೀನು ಮಾಲಿಕರು ಸುಮಾರು 50 ವರ್ಷಗಳಿಂದ ಅವರವರ ಜಮೀನುಗಳಲ್ಲಿ ಸ್ವಾಧಿನದಲ್ಲಿರು ಸಂಗತಿ ನನಗೆ ಗೊತ್ತು ಎಂದರೆ ಸರಿಯಲ್ಲ.

1 ರಿಂದ 3 ನೇ ಪ್ರತಿವಾದಿಯರು ದಿಃ 01-08-2017 ರಂದು ದಾವಾ ಸ್ವತ್ತಿನ ಕಬ್ಜಾ ಪಡೆಯಲು ಬಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರಿಗೆ ಕಬ್ಜಾ ಕೊಡದೆ ಅವರನ್ನು ವಾಪಸ್ಸು ಕಳುಹಿಸಿಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರ ಸುಮಾರು 50 ವರ್ಷಗಳಿಂದ ಪ್ರತಿವಾದಿಯರ ಹೆಸರಿನಲ್ಲಿದ್ದು ನಾವು ಅದನ್ನು 2017 ರಲ್ಲಿ ಪ್ರಶ್ನಿಸಿರುವ ಕಾರಣ ನಮ್ಮ ಬೇಡಿಕೆ ಕಾಲಮೀತಿ ಮೀರಿದೆ ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರದಲ್ಲಿನ 1 ಎಕರೆ ಜಮಿನಿಗೆ ಸುಮಾರು ರೂ. 20 ಲಕ್ಷ ಬೆಲೆಯಿಂದೆ. ಭೂಮಿಯ ಬೆಲೆ ಹೆಚ್ಚಾಗಿರುವ ಕಾರಣ ಹೇಗಾದರೂ ಮಾಡಿ ದಾವಾ ಸ್ವತ್ತನ್ನು ಕಬಳಿಸುವ ದುರುದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಶ್ರೀ. SKD ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಓ.ಎಸ್. ನಂ. 39/2017
ಪಿ.ಡಬ್ಲ್ಯೂ- 1

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.